


## ಮನೆಯೇ ಮೊದಲ ಪಾಠಶಾಲೆ

‘ಜೆನ್ ಅಲ್ಫಾ ಸಹ ಮಕ್ಕಳೇ ಅಲ್ವಾ?’ (ನ. 27, ಅಕ್ಷರ ದಾಮ್ಲೆ) ಮುಖಪುಟ ಲೇಖನ ಸಕಾಲಿಕವಾಗಿದೆ. ಮುದ್ದು ಮುದ್ದಾಗಿ ಮಾತಾಡುವ ಮಕ್ಕಳು ಪೋಷಕರಿಗಷ್ಟೇ ಅಲ್ಲ, ಎಲ್ಲರಿಗೂ ಅಚ್ಚುಮೆಚ್ಚು. ಆದರೆ ಅತೀ ಮುದ್ದಿನಿಂದ ಮಕ್ಕಳ ಭವಿಷ್ಯವೇ ಮಂಕಾಗುತ್ತಿದೆ ಎಂದು ಬಹುತೇಕರು ಅರಿತಿಲ್ಲ! ಮಕ್ಕಳು ಉದ್ಧಟತನದಿಂದ ಮಾತಾಡಿದರೆ, ಪೋಷಕರ ಮಾತುಗಳನ್ನೇ ಧಿಕ್ಕರಿಸುತ್ತಾರೆಂದರೆ, ಅದು ಅವರ ಆತ್ಮವಿಶ್ವಾಸ ಎಂಬ ದಡ್ಡತನವನ್ನು ಬಿಟ್ಟು ಅವರಿಗೆ ಸಭ್ಯತೆಯ ಪಾಠ ಮಾಡಬೇಕು. ಚಿಕ್ಕಂದಿನಿಂದಲೇ ನಯ ವಿನಯ, ಒಳ್ಳೆಯ ವಿಚಾರಗಳನ್ನು ಕಲಿಸಬೇಕು. ಮಕ್ಕಳೊಂದಿಗೆ ಅತಿಯಾದ ಶಿಸ್ತು, ಅತಿ ಸಲುಗೆಯೂ ಒಳ್ಳೆಯದಲ್ಲ. ಮಕ್ಕಳು ಅತಿಯಾಗಿ ವರ್ತಿಸುವುದರ ಹಿಂದೆ ಇಂದಿನ ತಂತ್ರಜ್ಞಾನದ ಪಾಲು ಇದೆಯಾದರೂ ಅದನ್ನು ನಿಯಂತ್ರಿಸುವ ಜಾಣ್ಮೆಯನ್ನು ಪೋಷಕರು ಅರಿತಿರಬೇಕು. ಮನೆಯೇ ಮೊದಲ ಪಾಠಶಾಲೆ ಅಲ್ಲವೇ!

—ಶೋಭಾ ಸಂಪತ್, ಬೆಂಗಳೂರು

## ಯುವ ಪೋಷಕರು ತಿಳಿಯಲಿ

ಈಗಿನ ಯುವ ಪೋಷಕರು ಓದಿ ತಿಳಿಯಬೇಕಾದ ಅತ್ಯುತ್ತಮ ಲೇಖನ. ದಿನೇ ದಿನೇ ಬೃಹತ್ತಾಗಿ ಬೆಳೆಯುತ್ತಿರುವ ಈ ಆಧುನಿಕ ಯುಗದಲ್ಲಿ ಜೀವನದ ಹಾದಿ ದಿಕ್ಕೆಟ್ಟು ಎಲ್ಲಿಗೆ ತಲುಪುತ್ತಿದ್ದೇವೆ ಎಂಬುದು ಯಕ್ಷಪ್ರಶ್ನೆ ಆಗಿದೆ. ಪೋಷಕರು ತಾವು ಬಾಲ್ಯದಲ್ಲಿ ಪಟ್ಟ ಶ್ರಮ/ಕಷ್ಟ ತಮ್ಮ ಮಕ್ಕಳು ಅನುಭವಿಸಬಾರದು ಎಂಬ ಭಾವನೆಯಿಂದ ದೂರ ಸರಿದು ಅವರ ಭವಿಷ್ಯದ ದೃಷ್ಟಿಯಿಂದ ಸರಿಯಾದ ರೀತಿಯಲ್ಲಿ ಬೆಳೆಸಬೇಕಿದೆ. ಮುಖ್ಯವಾಗಿ ಉದ್ಯೋಗಸ್ಥ ತಂದೆ ತಾಯಿಗಳು ಗಮನಿಸಬೇಕಾದ ಅಗತ್ಯವಿದೆ.

—ಕಮಲಾದೇವಿ ರಾಜಶೇಖರ ಹಳ್ಳೂರ್

## ಬದಲಾವಣೆ, ಬೆಳವಣಿಗೆ...

ಮಗುವಿನಲ್ಲಿನ ಆತ್ಮವಿಶ್ವಾಸಕ್ಕೆ, ಸಕಾರಾತ್ಮಕ ಆಲೋಚನೆಗಳಿಗೆ ತಾಯಿಯೇ ಬುನಾದಿ. ಮಕ್ಕಳು ಬಾಲ್ಯದಲ್ಲಿ ಬೆಳೆಸಿಕೊಳ್ಳುವ ಭಾವನೆಗಳು ಅವರ ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಯನ್ನು ನಿರ್ಧರಿಸುತ್ತವೆ. ಕಾಲೋಚಿತವಾಗಿ ಮಕ್ಕಳಲ್ಲಿ ಬದಲಾವಣೆ ಬೆಳವಣಿಗೆಗಳಾಗುವುದು ಸಹಜ.

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ



## ಅದ್ಭುತ ಅನುಭವ

‘ಅನಿಮಿಷರ ಲೋಕದಲ್ಲಿ ಕಡಲಾಳದ ನಡಿಗೆ’ (ನ. 27, ಡಾ. ಎಚ್. ಎಸ್ ಅನುಪಮಾ) ಆಸ್ಟ್ರೇಲಿಯಾ ಕರಾವಳಿ ಪಟ್ಟಣ ಕೇರ್ನ್ಸ್‌ನಿಂದ ಹವಳ ದ್ವೀಪದ ಅನುಭವವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದೆ. ನಾನೂ ಈ ದ್ವೀಪಕ್ಕೆ ಹೋಗಿ ಕಡಲಾಳದಲ್ಲಿ ಅದ್ಭುತ ದೃಶ್ಯ ಕಂಡು ಆನಂದಿಸಿದ್ದೇನೆ. ಪ್ರವಾಸದಲ್ಲಿ ತೆಗದುಕೊಳ್ಳಬೇಕಾದ ಎಚ್ಚರಿಕೆ ಮತ್ತು ಅಲ್ಲಿನ ಗೈಡ್ ಕೊಡುವ ಆತ್ಮವಿಶ್ವಾಸದ ಬಗ್ಗೆ ಚೆನ್ನಾಗಿ ವಿವರಿಸಿದ್ದಾರೆ.

—ಟಿ.ಎಸ್. ನಾಗರಾಜ ರಾವ್

## ದೋಸೆ ವೈವಿಧ್ಯ

‘ದೋಸೆಯ ದಾಸ’ ( ನ. 27, ರಾಜು ಅಡಕಳ್ಳಿ) ‘ಮಂದಹಾಸ’ ಬರಹ ಉತ್ತರ ಕನ್ನಡದ ಆಹಾರ ಪದ್ಧತಿಯನ್ನೂ ಪರಿಚಯಿಸಿತು. ಶಿರಸಿ ಸಿದ್ದಾಪುರದ ಕಡೆ ಬೆಳಗಿನ ಉಪಾಹಾರಕ್ಕೆ ಕಾಯಂ ಆಗಿ ನಮುನಮೂನೆಯ ನೀರು ದೋಸೆ ಮಾಡುವುದು ಸರ್ವೇ ಸಾಮಾನ್ಯ. ದೋಸೆ ಹಿಟ್ಟು ರುಬ್ಬಿ ಇಟ್ಟುಕೊಂಡರೆ ಮರುದಿನ ಬೆಳಗಿನ ಕೆಲಸ ಸಲೀಸು ಅಂತ ಅದೇ ರೂಢಿಯಾಗಿಬಿಟ್ಟಿದೆ. ಸಾಧಾರಣವಾಗಿ ಹಿಂದೆ ಕೂಡು ಕುಟುಂಬಗಳೇ ಜಾಸ್ತಿ ಇತ್ತು, ಅಂದಮೇಲೆ ಮನೆ ತುಂಬಾ ಜನರು. ದೋಸೆ ತಿಂಡಿ ಅಂದರೆ ತಲೆ ಬಿಸಿ ಕಡಿಮೆ. ಬೆಳಿಗ್ಗೆ ದೋಸೆ ಹೊಯ್ಯುವುದೊಂದೇ ಕೆಲಸ. ಅವರಿಗೆ ದೋಸೆ ಜೊತೆ ಚಟ್ನಿ ಬೇಕಂತ ಕಡ್ಡಾಯವಿಲ್ಲ. ನೆಂಚಿಕೊಳ್ಳಲು ಜೋನಿಬೆಲ್ಲ, ತುಪ್ಪ, ಬೆಣ್ಣೆ, ಜೇನು ತುಪ್ಪ, ಮೊಸರು ಇವುಗಳು ಯಾವುದಾದರೂ ನಡೆಯುತ್ತದೆ. ಎಲ್ಲಾ ಸ್ವಾಭಾವಿಕ, ಆರೋಗ್ಯಕರ.

— ಸುಭದ್ರ ನೇಗಿಲೋಣಿ, ಬೆಂಗಳೂರು



## ಸ್ವಾರಸ್ಯಕರ ಮಂದಹಾಸ

ದೋಸೆಯ ರೀತಿಗಳನ್ನು ಸೊಗಸಾಗಿ ಪರಿಚಯಿಸಿದ್ದಾರೆ. 60ರ ದಶಕದಲ್ಲಿ ಪ್ರಕಟವಾಗಿದ್ದ ಎ.ಎನ್. ಮೂರ್ತಿರಾವ್‌ರವರ ‘ದೋಸೆ’ ಪ್ರಬಂಧ ಜ್ಞಾಪಕಕ್ಕೆ ಬಂತು. ಬರಹ ಸ್ವಾರಸ್ಯಕರವಾಗಿದೆ.

—ಟಿ.ವಿ. ರಘೋತ್ತಮ, ಮೈಸೂರು

## ಕಾಳಜಿಯುಕ್ತ ಬರಹ

‘ಉಳಿಸಬನ್ನಿ ಅಘನಾಶಿನಿ’ (ನ. 27, ಗಣೇಶ ಹೊಸ್ಮನೆ) ಕಾಳಜಿಯುಕ್ತ ಬರಹ. ಪರಿಸರವನ್ನು ಅವ್ಯವಸ್ಥೆಯೆಡೆಗೆ ಎಳೆಯುವ ಯೋಜನೆಗಳನ್ನು ಓದುಗರ ಲಕ್ಷ್ಯಕ್ಕೆ ತರುವಲ್ಲಿ ಯಶಸ್ವಿಯಾಗಿದೆ. ಅದ್ಭುತ ವನಸಿರಿಯ ನಡುವೆ ಹರಿವ ನದಿಗಳು, ‘ಕಾಪಾಡಿ ನಮ್ಮನ್ನು’ ಎಂದು ಬೇಡುವಂತಿವೆ.

—ಸುಮನಾ, ಬೆಂಗಳೂರು

## ಬಲ ತುಂಬಲಿ

‘ಇನ್ನು ರಾಜ್ಯದೆಲ್ಲೆಡೆ ಅಕ್ಕ ಪಡೆ’ (ನ. 27, ಶಶಿಕಾಂತ ಎಸ್. ಶೆಂಬೆಳ್ಳಿ) ಲೇಖನ ಸ್ಫೂರ್ತಿದಾಯಕವಾಗಿದೆ. ಈ ಪಡೆ ಇಡೀ ರಾಜ್ಯಕ್ಕೆ ವಿಸ್ತಾರ ಆಗುತ್ತಿರುವುದು ಸಂತಸ. ಇಂತಹ ವಿಶೇಷ ಮಹಿಳಾ ಪೊಲೀಸ್ ಪಡೆಯ ಅವಶ್ಯಕತೆ ಬಹಳ ಕಾಲದಿಂದ ಇತ್ತು. ಈಗ ಆರಂಭವಾಗಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಿದರೆ ಮಾತ್ರ ಮಹಿಳೆಯರು ಸುರಕ್ಷಿತ ಜೀವನ ನಡೆಸಲು ಸಾಧ್ಯ. ಇಲಾಖೆ ಆರಂಭ ಶೂರತ್ವ ತೋರದೆ ಪಡೆಗೆ ಸೂಕ್ತ ಸೌಕರ್ಯ ಹಾಗೂ ನೈತಿಕ ಬಲವನ್ನು ತುಂಬಿದಾಗ ನಿಜವಾದ ಮಹಿಳಾ ರಕ್ಷಣಾ ಪಡೆಯಾಗಿ ಕಾರ್ಯನಿರ್ವಹಿಸಲು ಸಾಧ್ಯ.

—ವಾಸಣ್ಣ, ಧಾರವಾಡ

## ಅವಿಸ್ಮರಣೀಯ

‘ಬೆಳದಿಂಗಳು’ (ನ. 27, ಕೆ.ವಿ. ರಾಜಲಕ್ಷ್ಮಿ) ಕಥೆಯ ನಿರೂಪಣೆ, ಪಾತ್ರಗಳ ಸ್ವಭಾವ, ವ್ಯಾವಹಾರಿಕ ಸಂಭಾಷಣೆ, ತಿರುವು– ತೀರ್ಮಾನಗಳು, ಸೊಸೆಯ ತವರನ್ನೂ ಎತ್ತಿಹಿಡಿದು ಅಂತ್ಯ ಕಂಡಿದ್ದು ಮನ ತಣಿಸಿತು. ಕಥೆಗೆ ತಕ್ಕ ಚಿತ್ರಕಲೆ ಭಾಸ್ಕರ್ ಎಲ್. ಅವರದ್ದು. ಬೇಡವಾಗಿದ್ದ ಸೊಸೆ ಮೊಮ್ಮಗ ಬೆಳದಿಂಗಳಾಗಿ ಹೊಮ್ಮುವ ದೃಶ್ಯ ಅವಿಸ್ಮರಣೀಯ.



—ಕಾವ್ಯ ಭಾರದ್ವಾಜ್

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in